## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 23.09.2013 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| **ಶ್ರೀಯುತರುಗಳಾದ :** | |
| ಡಾ॥ಎಂ.ಎಸ್.ಶಿವಪ್ರಸಾದ್ – ಅಧ್ಯಕ್ಷರು | **ಕೌನ್ಸಿಲ್ ಕಾರ್ಯದರ್ಶಿ,** |
| ಎಂ.ಇ.ಪಿಳ್ಳಪ್ಪ – ಸದಸ್ಯರು | **ಮುಖ್ಯಲೆಕ್ಕಾಧಿಕಾರಿ,** |
| ವೀಣಾ ನಾಗರಾಜ್ – ಸದಸ್ಯರು | **ಮುಖ್ಯ ಅಭಿಯಂತರರು (ಬೃಹತ್ ನೀರುಗಾಲುವೆ), (ಯಲಹಂಕ),** |
| ಬಿ.ಎಸ್.ಆನಂದ್ – ಸದಸ್ಯರು | **ಸಹಾಯಕ ಆಯುಕ್ತರು (ಆಸ್ತಿಗಳು),** |
| ಕೃಷ್ಣ.ವಿ – ಸದಸ್ಯರು | **ಕಾರ್ಯಪಾಲಕ ಅಭಿಯಂತರರು (ಬೆಂ–ದಕ್ಷಿಣ), (ಸಾರಿಗೆ), (ರ.ಮೂ.ಸೌ), (ರಾಜಾಜಿನಗರ), (ಬ್ಯಾಟರಾಯನಪುರ),** |
| ಸಂಪತ್‌ರಾಜ್.ಆರ್ – ಸದಸ್ಯರು | **ಉಪ ಕಾನೂನು ಅಧಿಕಾರಿ,** |
| ಗೋವಿಂದರಾಜು.ಎನ್ – ಸದಸ್ಯರು | **ಸಹಾಯಕ ನಿಯಂತ್ರಕರು (ಹಣಕಾಸು–ಕೇಂದ್ರ),** |
| ಉದಯ್‌ಕುಮಾರ್.ಆರ್ – ಸದಸ್ಯರು | **ಕಂದಾಯ ಅಧಿಕಾರಿ (ಶಿವಾಜಿನಗರ), (ಚಿಕ್ಕಪೇಟೆ),** |
| ಸರಳ – ಸದಸ್ಯರು | **ಸಹಾಯಕ ಕಂದಾಯ ಅಧಿಕಾರಿ (ಕೆಂಪೇಗೌಡನಗರ), (ವಸಂತನಗರ), (ಅಂಜನಾಪುರ),** |
| ಸಿ.ಎಸ್.ರಾಧಾಕೃಷ್ಣ – ಸದಸ್ಯರು | **ಸಹಾಯಕ ಕಾರ್ಯಪಾಲಕ ಅಭಿಯಂತರರು (ಯಲಹಂಕ),** |
| **ಗೈರು ಹಾಜರಿದ್ದ ಸದಸ್ಯರುಗಳು** | **ಕಾರ್ಯಪಾಲಕ ಅಭಿಯಂತರರು (ಜಾಹೀರಾತು), (ಯಲಹಂಕ),** |
| ಗಂಗಾಧರ ಹೆಚ್.ಎನ್ – ಸದಸ್ಯರು | **ಇತರೆ ಸಿಬ್ಬಂಧಿ ವರ್ಗ.** |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

### ***01]. ವಿಷಯದ ಸಂಖ್ಯೆ :–ತೆಆಸ್ಥಾಸ/247/2012–13***

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಎ3(4)ಪಿಆರ್/205/12–13, ದಿನಾಂಕ:13.02.2013 ರಲ್ಲಿ ವಿವರಿಸಿರುವಂತೆ, ವಾರ್ಡ್–142, ಮೌಂಟ್‌ಜಾಯ್ ರಸ್ತೆ ಮತ್ತು ಹನುಮಂತನಗರ 4ನೇ ಕ್ರಾಸ್, ಸೇರುವ ವಾರ್ಡ್ ಕಛೇರಿ ಆವರಣದಲ್ಲಿ 8ಥ ಅಡಿ ಅಳತೆಯ ನಂದಿನಿ ಹಾಲಿನ ಮಳಿಗೆ ಸ್ಥಾಪಿಸಲು ದಿ: 04–11–2002 ರಿಂದ 16–04–2007 ರವರೆಗೆ ಮಾಸಿಕ 400/– ರೂ. ಗಳಂತೆಯೂ ದಿನಾಂಕ: 17–04–2007 ರಿಂದ 04–11–

2007 ರವರೆಗೆ ಮಾಸಿಕ 1,073/- ರೂ. ಗಳಂತೆ ಒಟ್ಟು 5 ವರ್ಷಗಳ ಅವಧಿಗೆ (04-11-2002 ರಿಂದ 03-11-2007) ರವರೆಗೆ ಅನುಮತಿ ನೀಡಲಾಗಿದ್ದು, ಗುತ್ತಿಗೆದಾರರು ಜುಲೈ 2008 ರವರೆಗೆ ಪಾವತಿಸಿರುವುದಾಗಿ ವರದಿ ಮಾಡುತ್ತಾ, ಗುತ್ತಿಗೆ ಅವಧಿ ನವೀಕರಿಸಲು ವಲಯಾಧಿಕಾರಿಗಳು ಪ್ರಸ್ತಾಪಿಸಿರುತ್ತಾರೆ.

ಗುತ್ತಿಗೆ ಅವಧಿಯನ್ನು ಪುನಃ ನವೀಕರಿಸಲು ಅರ್ಜಿದಾರರು ಕೋರಿದ್ದು, ದಿನಾಂಕ: 17-04-2007ರ ಮಾರ್ಗಸೂಚಿ ದರಗಳನ್ವಯ ಸ್ವತ್ತಿನ ಮಾರುಕಟ್ಟೆ ದರ ಚದರಡಿ 1ಕ್ಕೆ 2000/- ರೂ. ವಾಣಿಜ್ಯಕ್ಕೆ ಶೇ: 40% ಸೇರಿಸಿದಲ್ಲಿ 2800/- ರೂ. ಗಳಾಗುತ್ತದೆ ಸ್ವತ್ತಿನ ಮೌಲ್ಯ 48 ಚದರಡಿಗಳಿಗೆ 1,34,400/- ರೂ. ಗಳಾಗುತ್ತದೆ. ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ 13,440/- ರೂ. ಮಾಸಿಕ 1120/- ರೂ. ಗಳಾಗುತ್ತದೆ.

ದಿನಾಂಕ: 26-09-2011 ರ ಮಾರ್ಗಸೂಚಿಯಂತೆ ಪರಿಷ್ಕೃತ ದರ ಚದರಡಿ 1 ಕ್ಕೆ 3000/- ರೂ. ಗಳಿದ್ದು, ವಾಣಿಜ್ಯಕ್ಕೆ 40% ಸೇರಿಸಿದಲ್ಲಿ ಚದರಡಿ 1 ಕ್ಕೆ 4200/- ರೂ. ಗಳಾಗುತ್ತದೆ. ಸ್ವತ್ತಿನ ಮೌಲ್ಯ 48 ಚ.ಅ ಥ 4200=201600/- ಗಳಾಗುತ್ತದೆ. ಶೇ: 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ 20,160/- ರೂ. ಗಳು ಮಾಸಿಕ 1680/- ರೂ ಗಳಾಗುತ್ತದೆ.

ನಂದಿನಿ ಹಾಲಿನ ಬೂತ್ ಮುಂದುವರೆಯುತ್ತಿದ್ದು, ನಂದಿನಿ ಬೂತ್ ನಡೆಸಲು ಪಾಲಿಕೆಯ ಜಾಗವನ್ನು ಉಪಯೋಗಿಸಿಕೊಂಡಿದ್ದು, ಇದರ ಪೂರ್ಣ ಲಾಭವನ್ನು ಅರ್ಜಿದಾರರು ಪಡೆದಿರುವುದರಿಂದ ಬಿಬಿಎಂಪಿ ಆರ್ಥಿಕ ಹಿತದೃಷ್ಟಿಯಿಂದ ದಿನಾಂಕ: 01-11-2007 ರಿಂದ 30-11-2012ರ ಘಟನೋತ್ತರ ಅವಧಿಗೆ ಆಯಾ ಆರ್ಥಿಕ ವರ್ಷದಲ್ಲಿ ನಿಗಧಿಪಡಿಸಿರುವ ಮಾರುಕಟ್ಟೆ ದರಗಳಂತೆ ಪಾವತಿಸಿಕೊಂಡು ದಿನಾಂಕ: 01-12-2012ರಿಂದ ಮುಂದಿನ 3-ವರ್ಷಗಳ ಅವಧಿಗೆ ನವೀಕರಿಸಬಹುದಾಗಿದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ವಿಶೇಷ ಆಯುಕ್ತರ ದಿನಾಂಕ : 13.02.2013ರ ಟಿಪ್ಪಣಿಯನ್ನು ಒಪ್ಪಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 19.02.2013ರ ನಿರ್ಣಯ.

**-ಮುಂದೂಡಿದೆ-**

## *02]. ವಿಷಯದ ಸಂಖ್ಯೆ :-ತೆಆಸ್ಥಾಸ/259/2012-13*

ಆಯುಕ್ತರ ಟಿಪ್ಪಣಿ ದಿನಾಂಕ : 11.03.2013ರಲ್ಲಿ ವಿವರಿಸಿರುವಂತೆ, ಶ್ರೀ ಕೆ.ಎಸ್. ನಾಗರಾಜ್‌ರವರನ್ನು ಪತ್ರಿಕಾ ಕಾರ್ಯದರ್ಶಿಯನ್ನಾಗಿ ಗುತ್ತಿಗೆ ಆಧಾರದ ಮೇಲೆ ಇಯೋಜಿಸುವ ಬಗ್ಗೆ, ಪೂಜ್ಯ ಮಹಾಪೌರರ ಟಿಪ್ಪಣಿಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹಾಪೌರರ ಹುದ್ದೆಯು ಪ್ರತಿಷ್ಠಿತ ಹುದ್ದೆಯಾಗಿದ್ದು, ಸದರಿ ಹುದ್ದೆಯಲ್ಲಿ ಜವಬ್ದಾರಿಯುತವಾದ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕಾಗಿದ್ದು, ಪ್ರತಿನಿತ್ಯ ಸಾರ್ವಜನಿಕರಿಂದ ಬರುವ ದೂರುಗಳಿಗೆ, ಟೀಕೆ ಟಿಪ್ಪಣಿಗಳಿಗೆ ಅಲ್ಲದೇ ಪತ್ರಿಕಾ ಮಾಧ್ಯಮ ಮತ್ತು ದೃಶ್ಯ ಮಾಧ್ಯಮಗಳ ಟೀಕೆ ಟಿಪ್ಪಣಿಗಳಿಗೆ ಸ್ಪಂಧಿಸುವ ಮೂಲಕ ಕೆಲಸ ನಿರ್ವಹಿಸಬೇಕಾಗಿರುವುದರಿಂದ ಒಬ್ಬ ನುರಿತ ಪತ್ರಿಕಾ ಕಾರ್ಯದರ್ಶಿಯವರ ಅವಶ್ಯಕತೆಯಿರುವುದಾಗಿ ತಿಳಿಸಿರುತ್ತಾರೆ.

ಆದ್ದರಿಂದ ಶ್ರೀ ಕೆ.ಎಸ್.ನಾಗರಾಜ್, ನಂ.605, ಮೊದಲ ಮಹಡಿ, 10ನೇ ಎ ಮುಖ್ಯರಸ್ತೆ, 3ನೇ ವಿಭಾಗ, 4ನೇ ಹಂತ, ಬಸವೇಶ್ವರನಗರ, ಬೆಂಗಳೂರು-79 ಇವರು ಪತ್ರಿಕಾ ಮತ್ತು ಟಿ.ವಿ ಮಾಧ್ಯಮಗಳ ಕಾರ್ಯಚಟುವಟಿಕೆಯಲ್ಲಿ ಒಳ್ಳೆಯ ಅನುಭವ ಹೊಂದಿರುವುದರಿಂದ, ಸದರಿಯವರನ್ನು ಸಂಚಿತ ವೇತನದ ಆಧಾರದ ಮೇಲೆ ಪೂಜ್ಯ ಮಹಾಪೌರರ ಪತ್ರಿಕಾಕಾರ್ಯದರ್ಶಿಯನ್ನಾಗಿ ನಿಯೋಜಿಸಿಕೊಳ್ಳಲು ಹಾಗೂ ಕೆ.ಎಂ.ಸಿ. ನಿಯಮಗಳ ನಿಯಮ 20(ಬಿ)ರ ಅಡಿಯಲ್ಲಿ ಮಾಸಿಕ ರೂ.15,000/-ಗಳ ಹಣ ಪಾವತಿಸಲು ಕ್ರಮ ತೆಗೆದುಕೊಳ್ಳಲು ಕೋರಿರುತ್ತಾರೆ.

ಈ ಸಂಬಂಧವಾಗಿ, ಈ ಹಿಂದೆ ಶ್ರೀ ರಾಘವೇಂದ್ರ ಇವರನ್ನು ಕಾನೂನು ಕೋಶದ ಮುಖ್ಯಸ್ಥರ ದಿನಾಂಕ 06.07.2011ರ ವರದಿಯನ್ವಯ 1977ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ನಿಯಾಮಾವಳಿಗಳ ನಿಯಮ -20(ಬಿ)ರನ್ವಯ ಪೂಜ್ಯ ಮಹಾಪೌರರ ಪತ್ರಿಕಾ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ ಸರ್ಕಾರದ ಪೂರ್ವಾನುಮತಿ ಪಡೆದ ನಂತರ ಸದರಿಯವರನ್ನು ನಿಯಮಾನುಸಾರ ಸಂಚಿತ ವೇತನದ ಮೇಲೆ ನೇಮಿಸಿಕೊಳ್ಳಬಹುದು ಎಂದು ಅಭಿಪ್ರಾಯಿಸಿರುತ್ತಾರೆ.

ಆದ್ದರಿಂದ, ಶ್ರೀ ಕೆ.ಎಸ್.ನಾಗರಾಜ್, ಪೂಜ್ಯ ಮಹಾಪೌರರ ಪತ್ರಿಕಾ ಕಾರ್ಯದರ್ಶಿಯನ್ನಾಗಿ ದಿನಾಂಕ : 24.05.2012 ರಿಂದ ಏಪ್ರಿಲ್-2013ರವರೆಗೆ ನಿಯೋಜಿಸಿಕೊಳ್ಳಲು ಹಾಗೂ ಕೆ.ಎಂ.ಸಿ ನಿಯಮಗಳ ನಿಯಮ

20(ಬಿ)ರ ಅಡಿಯಲ್ಲಿ ಮಾಸಿಕ ಸಂಚಿತ ವೇತನ ರೂ.15,000/-ಗಳಿಗೆ ನಿಯೋಜಿಸುವ ಬಗ್ಗೆ ಸರ್ಕಾರದ ಘಟನೋತ್ತರ ಅನುಮೋದನೆ ಕೋರಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ಮಾನ್ಯ ಆಯುಕ್ತರ ದಿ.11.03.2013ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿರುತ್ತದೆ.**

## *03]. ವಿಷಯದ ಸಂಖ್ಯೆ :-ತೆಆಸ್ಥಾಸ/260/2012-13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಕಾ.ಪಾ.ಅ(ಬ್ಯಾ.ವಿ)/ಪಿಆರ್/279/12-13, ದಿನಾಂಕ : 11.03.2013ರಲ್ಲಿ ವಿವರಿಸಿರುವಂತೆ, ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ವಿಭಾಗ ವ್ಯಾಪ್ತಿಯಲ್ಲಿ ಬರುವ ವಾರ್ಡ್ ಸಂಖ್ಯೆ – 06ರಲ್ಲಿ ಸಂಚಾರಿ ಪೋಲಿಸ್ ಇಲಾಖೆಯವರು ಹೆಗ್ಗಡೆನಗರ ಮುಖ್ಯ ರಸ್ತೆಯಲ್ಲಿ ಹಾಸ್ಟೆಲ್ ನಿರ್ಮಿಸುತ್ತಿದ್ದು, ಕಟ್ಟಡವನ್ನು ಪ್ರಾರಂಭಿಸಿದಾಗ ತಳಪಾಯಕ್ಕೆ ಅಗೆದ ಮಣ್ಣನ್ನು ಕಾಂಪೌಂಡ್ ಪಕ್ಕದಲ್ಲಿ ಶೇಖರಿಸಿರುತ್ತಾರೆ. ಇದರಿಂದಾಗಿ ಹೆಗ್ಗಡೆನಗರದ 1 ಕ್ರಾಸ್‌ನಿಂದ 8ನೇ ಕ್ರಾಸ್‌ವರೆಗೆ ಚರಂಡಿಗಳಲ್ಲಿ ನೀರು ಸರಾಗವಾಗಿ ಹರಿಯದೇ ನಿಂತಲ್ಲೇ ನಿಂತು ವಾಸನೆ ಬರುತ್ತಿದ್ದು, ಇದರಿಂದ ನಾಗರೀಕರಿಗೆ ಸಾಂಕ್ರಾಮಿಕ ರೋಗಗಳು ಹರಡುವ ಸಂಭವಿರುವುದರಿಂದ ಹಾಗೂ ಪೋಲಿಸ್ ಇಲಾಖೆಯ ಕಾಂಪೌಂಡ್ ಪಕ್ಕ ಚರಂಡಿ ನಿರ್ಮಿಸಲು ಅನುಮತಿ ನೀಡದಿರುವ ಕಾರಣ ಅಡ್ಡರಸ್ತೆಗಳ ಚರಂಡಿ ನೀರನ್ನು ಮುಖ್ಯ ರಸ್ತೆಯ ಚರಂಡಿಗೆ ಹರಿಯುವಂತೆ ಮಾಡಿ ಶಬರಿ ನಗರದ 1ನೇ ಅಡ್ಡರಸ್ತೆ ಮೂಲಕ ರಾಜಕಾಲುವೆಗೆ ಹರಿಯುವಂತೆ ಮಾಡಲು ಈ ಕೆಳಕಂಡ ಅಂದಾಜು ಪಟ್ಟಿಯನ್ನು ಮುಖ್ಯ ಅಭಿಯಂತರರು ಯಲಹಂಕ ವಲಯರವರಿಗೆ ಸಲ್ಲಿಸಿದ್ದು, ಕಂಡಿಕೆ 46ರಲ್ಲಿ 2012-13ನೇ ಸಾಲಿನ ಆಯವ್ಯಯದಲ್ಲಿನ ಲಭ್ಯವಿರುವ ಯಾವುದೇ ಅನುದಾನದಲ್ಲಿ ಮರುಹೊಂದಾಣಿಕೆ ಮಾಡಿಕೊಂಡು ಜಾಬ್‌ಕೋಡ್ ನೀಡಲು ಹಾಗೂ ಕಾಮಗಾರಿಯನ್ನು ನಿರ್ವಹಿಸಲು ಮಾನ್ಯ ಆಯುಕ್ತರು ಅನುಮೋದನೆ ನೀಡಿರುತ್ತಾರೆ.

| ಖಟ.ಓಠ | ಘಚಿಡಿಜ ಓಠ | ಓಚಿಟಜ ಠಜಿ ಣUಜ ಘಂಡಿಞ | ಂಟಾಚಿಣ ಟಿ ಟಚಿಞು |
|---|---|---|---|
| 1 | 6 | ಆಜಾಚಿಟಟಜಜ ಇಣಟಚಿಣಜ ಜಿಠಡಿ ಣUಜ ತಿಠಡಿಞ ಠಜಿ ಖಜ-ಅಠಟಿಣಡಿಣಭಿಣಠಟಿ ಠಜಿ ಅಣಟಿತಜಡಿಣ ಚಿಟಜ ,ಠಟಜ ಃಟಠಭಿಞ ಜಡಿಚಿಟಿ ಚಿಣ ಊಜಜಜಜಟಿಚಿಠಚಿಡಿಚಿ, ಙಚಿಭಿಡಿಟಿಚಿಠಚಿಡಿಚಿ ಡಿಠಚಿಜ ಟಿ ,ಚಿಡಿಜ ಟಠ-06 ಃಥಿಚಿಣಚಿಡಿಚಿಥಿಚಿಟಿಚಿರಿಣಡಿಚಿ ,ಣಖ ಜಘಾಟಿ | 60.60 |

ಮೇಲ್ಕಂಡ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಹಾಗೂ ಅನುದಾನ ಬಿಡುಗಡೆಗೊಳಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 11.03.2013ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗೆ 2013-14ನೇ ಸಾಲಿನ ಆಯವ್ಯಯದಲ್ಲಿ ಉಪಯೋಗವಾಗದೇ ಉಳಿಕೆಯಾಗುವ ಅನುದಾನದಲ್ಲಿ ಮರು ಹೊಂದಾಣಿಕೆ ಮಾಡಿಕೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

## *04]. ವಿಷಯದ ಸಂಖ್ಯೆ :-ತೆಆಸ್ಥಾಸ/261/2012-13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜ.ಆ.(ಜಾ)/ಪಿಆರ್/268/12-13, ದಿನಾಂಕ : 13.03.2013ರಲ್ಲಿ ವಿವರಿಸಿರುವಂತೆ, ಮಾನ್ಯ ಉಪಮಹಾಪೌರರು ತಮ್ಮ ಪತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕಂದಾಯ ಇಲಾಖೆಯ ಸಹಾಯಕ ಕೇಂದ್ರಗಳು 353 ಇದ್ದು, ಇವುಗಳಲ್ಲಿ ಆಯ್ಕೆ ಮಾಡಿದ 222 ಸಹಾಯಕ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ನಗರ ಪಾಲಿಕೆಯಿಂದ ದೊರಕುವ ಸೌಲಭ್ಯಗಳನ್ನು ಪ್ರಚಾರ ಪಡಿಸಲು ವಿಶಿಷ್ಟ ಫಲಕಗಳನ್ನು ಅಳವಡಿಸುವುದು ಅವಶ್ಯಕ ಎಂದು ಕಂಡು ಬಂದಿದೆ ಎಂದು ಈ ಹಿನ್ನೆಲೆಯಲ್ಲಿ ಸಹಾಯಕ ಕೇಂದ್ರಗಳಲ್ಲಿ ವಿಶೇಷ ರೀತಿಯಲ್ಲಿ ಫಲಕಗಳನ್ನು ಅಳವಡಿಸಲು 2011-12ನೇ ಸಾಲಿನ ಆಯವ್ಯಯದ 01 ಕೌನ್ಸಿಲ್ ವೆಚ್ಚಗಳು-ಉಪಮಹಾಪೌರರು ಆಜ್ಞೆ ಮಾಡಿದ ವಿಶೇಷ ಕಾಮಗಾರಿಗಳು

ಶೀರ್ಷಿಕೆ ಪಿ–2178 ಅಡಿಯಲ್ಲಿ ಮೀಸಲಿರಿಸಿರುವ 2,500.00 ಲಕ್ಷಗಳ ಅನುದಾನದಲ್ಲಿ ರೂ.200.00 ಲಕ್ಷಗಳ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. ಸಾರ್ವಜನಿಕ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಈ ಕೆಲಸವನ್ನು ಎಂ.ಸಿ.ಎ (ಕರ್ನಾಟಕ ರಾಜ್ಯ ಸರ್ಕಾರದ ಅಂಗ ಸಂಸ್ಥೆ) ಮುಖಾಂತರ ನಿಯಮಾನುಸಾರ ಕೈಗೆತ್ತಿಕೊಂಡು ನಿರ್ವಹಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಕೋರಿರುತ್ತಾರೆ.

ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಇಲಾಖೆಗಳಿಂದ ಅನೇಕ ಕಾರ್ಯಕ್ರಮಗಳನ್ನು ಸಾರ್ವಜನಿಕರಿಗಾಗಿ ಜಾರಿಗೆ ತರಲಾಗಿದ್ದು, ಈ ಕಾರ್ಯಕ್ರಮಗಳನ್ನು ಸಾರ್ವಜನಿಕರ ಅವಗಾಹನಗೆಗೆ ತರುವ ಕುರಿತು.

ಕಂದಾಯ ಇಲಾಖೆಯ ಸಹಾಯಕ ಕೇಂದ್ರಗಳು 353 ಇದ್ದು, ಇವುಗಳಲ್ಲಿ ಆಯ್ಕೆ ಮಾಡಿದ 222 ಸಹಾಯಕ ಕೇಂದ್ರಗಳಲ್ಲಿ ಪಾಲಿಕೆಯಿಂದ ನಾಗರೀಕರಿಗೆ ದೊರಕುವ ಸೌಲಭ್ಯಗಳನ್ನು ಮತ್ತು ಕಾರ್ಯಕ್ರಮಗಳನ್ನು ಪ್ರಚುರ ಪಡಿಸಬಹುದಾಗಿದ್ದು, ಹಾಗೆಯೇ ಪಾಲಿಕೆಯ 6 ರೆಫೆರೆಲ್ ಆಸ್ಪತ್ರೆಗಳು, 24 ಹೆರಿಗೆ ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ದೊರಕುವ ಚಿಕಿತ್ಸಾ ಸೌಲಭ್ಯಗಳನ್ನು ಮತ್ತು ಕಾರ್ಯಕ್ರಮಗಳನ್ನು ಪ್ರಚುರ ಪಡಿಸಬಹುದಾಗಿದ್ದು, ಈ ಫಲಕಗಳನ್ನು ತಯಾರಿಸಿ / ಮುದ್ರಿಸಿ ಅಳವಡಿಸಬೇಕಾಗಿರುತ್ತದೆ ಈ ಕಾರ್ಯವನ್ನು ಮೆ॥ ಎಂ.ಸಿ.ಎ (ಕರ್ನಾಟಕ ರಾಜ್ಯ ಸರ್ಕಾರದ ಅಂಗ ಸಂಸ್ಥೆ) ವತಿಯಿಂದ ಕೈಗೊಳ್ಳಬೇಕಾಗಿರುತ್ತದೆ.

ಈ ಕಾರ್ಯಕ್ಕಾಗಿ 2011–12ನೇ ಸಾಲಿನ ಆಯವ್ಯಯದ 01 ಕೌನ್ಸಿಲ್ ವೆಚ್ಚಗಳು–ಉಪ ಮಹಾಪೌರರು ಆಜ್ಞೆ ಮಾಡಿದ ವಿಶೇಷ ಕಾಮಗಾರಿಗಳು ಶೀರ್ಷಿಕೆ ಪಿ–2178 ಅಡಿಯಲ್ಲಿ ಮೀಸಲಿರುವ 2,500.00 ಲಕ್ಷಗಳ ಅನುದಾನದಲ್ಲಿ ರೂ.200.00 ಲಕ್ಷಗಳ ಮೊತ್ತದಲ್ಲಿ ಭರಿಸಬೇಕಾಗಿರುತ್ತದೆ. ಲೆಕ್ಕಾಧಿಕಾರಿಗಳ ಕಛೇರಿಯಿಂದ ಪಡೆಯಲಾದ ದಿನಾಂಕ:03.03.2012ರ ವೆಚ್ಚಗಳ ಪಟ್ಟಿಯಲ್ಲಿ ರೂ.422.00 ಲಕ್ಷಗಳು ಖರ್ಚಾಗಿರುತ್ತದೆ.

ದಿನಾಂಕ:10.04.2012 ರಂದು ಮುಖ್ಯ ಆರ್ಥಿಕ ಅಧಿಕಾರಿ (ಜೆ.ಎನ್.ಎನ್.ಯು.ಆರ್.ಎಂ) ರವರು ಸದರಿ ಕಾಮಗಾರಿಗೆ ಅನುದಾನದ ಅಡಿ ಜಾಬ್ ನಂಬರನ್ನು ಸಹ ನೀಡಿರುತ್ತಾರೆ. ತದನಂತರ ಮುಖ್ಯ ಲೆಕ್ಕಾಧಿಕಾರಿಗಳ ಅಭಿಪ್ರಾಯದ ಮೇರೆಗೆ ಮೆ॥ ಎಂ.ಸಿ.ಎ. ಸಂಸ್ಥೆರವರಿಗೆ ಈ ಕೆಲಸವನ್ನು ಪಾರದರ್ಶಕ ನಿಯಮನುಸಾರ ಕೆ.ಟಿ.ಟಿ.ಪಿ. ಕಾಯ್ದೆಯ ಅನ್ವಯ ಪ್ರಕ್ರಿಯೆಯನ್ನು ನಿರ್ವಹಿಸಲು ಮೆ॥ ಎಂ.ಸಿ.ಎ.ಸಂಸ್ಥೆರವರಿಗೆ ಕೆಲವು ಷರತ್ತುಗಳನ್ನು ವಿಧಿಸಿ ಕಾರ್ಯಾದೇಶವನ್ನು ನೀಡಲಾಯಿತು.

ಅದರಂತೆ, ಮೆ॥ ಎಂ.ಸಿ.ಎ. ಲಿಮಿಟೆಡ್ ರವರು ದಿನಾಂಕ:11.06.2012 ರಂದು ಪತ್ರಿಕಾ ಮುಖೇನ ಟೆಂಡರ್ ಪ್ರಕಟಣೆಯನ್ನು ಪ್ರಕಟಿಸಿ ಸದರಿ ಟೆಂಡರ್‌ನಲ್ಲಿ ಯಶಸ್ವಿ ಬಿಡ್ಡುದಾರರಾದ ಮೆ॥ ಮ್ಯಾನುಮೆಂಟ್ ಅಡ್ವರ್‌ಟೈಸರ್ಸ್ ಪ್ರೈ ಲಿ., ರವರ ಮುಖಾಂತರ ಪಾಲಿಕೆಯ 177 ಸ್ಥಳಗಳಲ್ಲಿ ಬ್ಯಾಕ್ ಲಿಟ್ ಮಲ್ಟಿ ಇಮೇಜಸ್ ಸ್ಕಾಲರ್ ಬೋರ್ಡ್‌ನ್ನು ತಯಾರಿಸಿ

ಮುದ್ರಣದೊಂದಿಗೆ ಸರಬರಾಜು ಮಾಡಿ ಅಳವಡಿಸಿರುವುದಾಗಿ ಕಾರ್ಯಾದೇಶದ ಅನ್ವಯ ವರದಿಯೊಂದಿಗೆ ರೂ.1,99,82,769/–ಗಳ ಬಿಲ್ಲನ್ನು ಸಲ್ಲಿಸಿರುತ್ತಾರೆ. ಇದರ ಕುರಿತು ಈ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು (ಜಾಹೀರಾತು) ರವರು ಅಳವಡಿಸಿರುವ ಬೋರ್ಡ್‌ಗಳ ಸ್ಥಳ ತನಿಖೆ ಮಾಡಿ ಛಾಯಾ ಚಿತ್ರದೊಂದಿಗೆ ಸಂಬಂಧಪಟ್ಟ ಕಛೇರಿಯ ಸ್ವೀಕೃತಿಯನ್ನು ತಮ್ಮ ವರದಿಯಲ್ಲಿ ದಿನಾಂಕ:18.02.2013 ರಂದು ಮಂಡಿಸಿರುತ್ತಾರೆ.

ಈ ಪ್ರಸ್ತಾವನೆಯ ಆಡಳಿತಾತ್ಮಕ ಅನುಮೋದನೆ ಸ್ಥಿರೀಕರಣ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ : ಮಾನ್ಯ ಆಯುಕ್ತರ ದಿ.13.03.2013ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *05]. ವಿಷಯದ ಸಂಖ್ಯೆ :–ತೆಆಸ್ಥಾಸ/262/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ ಃ ಮು.ಅ(ರ.ಮೂ.ಸೌ)/ಪಿಆರ್/5401/2012–13, ದಿನಾಂಕ : 14.03.2013ರಲ್ಲಿ ವಿವರಿಸಿರುವಂತೆ, ಬನಶಂಕರಿ 2ನೇ ಹಂತದ ಕದಿರೇನಹಳ್ಳಿ ಕೆಳಸೇತುವೆ ನಿರ್ಮಾಣ ಕಾಮಗಾರಿಗೆ ಕರೀಸಂದ್ರ (ಭವಾನಿನಗರ ಸ್ಲಂ) ಕದಿರೇನಹಳ್ಳಿ ಮತ್ತು ಜರಗನಹಳ್ಳಿ ಗ್ರಾಮಗಳ ಹಲವಾರು ಸ್ವತ್ತುಗಳು/ಆಸ್ತಿಗಳು ಒಳಪಟ್ಟಿದ್ದು, ಸದರಿ ಗ್ರಾಮಗಳಲ್ಲಿ ಅನೇಕ ವರ್ಷಗಳಿಂದ ತಾತ್ಕಲಿಕ ಶೆಡ್/ಮನೆಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದ ಕಡುಬಡವರಿಗೆ, ಹಿಂದುಳಿದ ಪಂಗಡ, ಪರಿಶಿಷ್ಠ

ವರ್ಗದವರಿಗೆ ಹಾಗೂ ಆರ್ಥಿಕವಾಗಿ ದುರ್ಬಲರಾಗಿದ್ದವರಿಗೆ ಸಕ್ರಮಗೊಳಿಸಿ ಬಿ.ಡಿ.ಎ. ವತಿಯಿಂದ ನಿವೇಶನ ಮಂಜೂರು ಮಾಡಿ ಹಕ್ಕು ಪತ್ರಗಳನ್ನು ಪಡೆದುಕೊಂಡಿರುತ್ತಾರೆ ಹಾಗೂ ಕಂದಾಯ ಇಲಾಖೆಯಿಂದ ಹಕ್ಕು ಪತ್ರಗಳನ್ನು ಪಡೆದು ಪಾಲಿಕೆಯಿಂದ ಖಾತಾ ನೊಂದಾಯಿಸಿಕೊಂಡಿರುತ್ತಾರೆ. ಇನ್ನು ಹಲವಾರು ನಿವಾಸಿಗಳು ಬಿ.ಡಿ.ಎ.ಯಿಂದ ಸ್ವಾಧೀನ ಪತ್ರ ಹೊಂದಿದ್ದು, ಕೆಲವರು ಯಾವುದೇ ದಾಖಲೆಗಳನ್ನು ಪಡೆಯದೇ ಮನೆಗಳನ್ನು ನಿರ್ಮಿಸಿಕೊಂಡು ವಾಸವಾಗಿದ್ದ 40 ಆಸ್ತಿಗಳನ್ನು ಕಾಮಗಾರಿಯ ಉದ್ದೇಶಕ್ಕಾಗಿ ಈ ಹಿಂದೆ ದಿನಾಕ : 11.01.2012ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ : 24.02.2011ರ ನಿರ್ಣಯದ ಮೇರೆಗೆ ಹಾಗೂ ದಿನಾಂಕ : 27.11.2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೀರ್ಮಾನ ನಿರ್ಣಯದ ಮೇರೆಗೆ ಟಿ.ಡಿ.ಆರ್. ಬೈಬ್ಯಾಕ್ ಯೊಜನೆಯಡಿಯಲ್ಲಿ 40 ಆಸ್ತಿಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಕಾಮಗಾರಿ ಪ್ರಗತಿ ಸಮಯದಲ್ಲಿ ಕರೀಸಂದ್ರ ಗ್ರಾಮದ ಸರ್ವೆ ನಂ.24/2 ರಲ್ಲಿನ ಶ್ರೀ.ಪೆರಿಯಸ್ವಾಮಿ ಎಂಬುವರಿಗೆ ಸೇರಿದ ನಿವೇಶನ / ಮನೆಯ ಭಾಗಶಃ ಭಾಗವು ಸರ್ವೀಸ್ ರಸ್ತೆ ನಿರ್ಮಾಣ ಕಾಮಗಾರಿಗೆ ಬೇಕಾದ ಕಾರಣ ಹಾಗೂ ಅಂಡರ್‌ಪಾಸ್ ಉದ್ಘಾಟನೆಯ ದಿನಾಂಕವನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಶೀಘ್ರ ನಿಗಧಿಪಡಿಸಲಾಗಿ ಸರ್ವೀಸ್ ರಸ್ತೆಯನ್ನು ತುರ್ತಾಗಿ ಮಾಡಿ ಮುಗಿಸಬೇಕಾಗಿ ಬಂದ ಹಿನ್ನೆಲೆಯಲ್ಲಿ ಸ್ಥಳಿಯ ನಗರ ಪಾಲಿಕೆ ಸದಸ್ಯರು ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳು ಸ್ವತ್ತಿನ ಮಾಲೀಕರೊಂದಿಗೆ ಮಾತುಕತೆ ನಡೆಸಿ, ಪರಿಹಾರವನ್ನು ಪಾಲಿಕೆಯಿಂದ ನೀಡುವುದಾಗಿ ಭರವಸೆ ನೀಡದ ಮೇರೆಗೆ, ಸದರಿ ಸ್ವತ್ತಿನ ಮಾಲೀಕರಾದ ಶ್ರೀ.ಪೆರಿಯಸ್ವಾಮಿಯವರು ಒಪ್ಪಿ ಜಾಗವನ್ನು ಬಿಟ್ಟುಕೊಟ್ಟಿರುತ್ತಾರೆ ಮತ್ತು ಪಾಲಿಕೆಯು ಸದರಿ ಜಾಗವನ್ನು ಸರ್ವೆ ಮಾಡಿ ನಕ್ಷೆ ತಯಾರಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಸದರಿ ಆಸ್ತಿಯು ಈ ಹಿಂದೆ ವಶಪಡಿಸಿಕೊಂಡ 40 ಆಸ್ತಿಗಳಲ್ಲಿ ಸೇರಿರುವುದಿಲ್ಲ. ಸದರಿ ಆಸ್ತಿಗೆ ಪರಿಹಾರವನ್ನು 88.96 ಚದರ ಅಡಿಗಳ ನಿವೇಶನಕ್ಕಾಗಿ ರೂ.2,51,880/- ಹಾಗೂ 83.96 ಚದರ ಅಡಿಗಳ ಕಟ್ಟಡದ ಮೌಲ್ಯ ರೂ.25,188/- ಒಟ್ಟು ರೂ.2,77,068/- ಗಳನ್ನು ಮೌಲ್ಯ ಮಾಪನ ಮಾಡಲಾಗಿರುತ್ತದೆ.

ಮೇಲ್ಕಂಡ ವಿಷಯದ ಹಿನ್ನಲೆಯಲ್ಲಿ ಟಿ.ಡಿ.ಆರ್.ಬೈಬ್ಯಾಕ್ ಯೋಜನೆಯಡಿಯಲ್ಲಿ ಶ್ರೀ.ಪೆರಿಯಸ್ವಾಮಿಯವರಿಗೆ ರೂ.2,77,068/- (ರೂ.ಎರಡು ಲಕ್ಷದ ಎಪ್ಪತ್ತೇಳು ಸಾವಿರದ ಅರವತ್ತೇಂಟು ಮಾತ್ರ) ಗಳ ಪರಿಹಾರವನ್ನು ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ವಿಶೇಷ ಆಯುಕ್ತರು (ಯೋಜನೆ) ರವರ ದಿ.14.03.2013ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *06]. ವಿಷಯದ ಸಂಖ್ಯೆ :-ತೆಆಸ್ಥಾಸ/263/2012-13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 15.03.2013ರಲ್ಲಿ ವಿವರಿಸಿರುವಂತೆ, ವಾರ್ಡ್ ನಂ.06 (ಥಣಿಸಂದ್ರ) ವ್ಯಾಪ್ತಿಯಲ್ಲಿನ ದಾಸರಹಳ್ಳಿ, ರಾಚೇನಹಳ್ಳಿ ಮತ್ತು ಥಣಿಸಂದ್ರ ಈ ಮೂರು ಹಳ್ಳಿಗಳು ಹೊಸದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರ್ಪಡೆಗೊಂಡಿರುತ್ತದೆ. ಆದುದರಿಂದ ಪಾಲಿಕೆಯ 2012-13ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ : 131 ಪಿ-2654, ರ 110 ಗ್ರಾಮಗಳಿಗೆ ವಿಶೇಷ ಅಭಿವೃದ್ಧಿ ಪ್ಯಾಕೇಜ್ ಅನುದಾನದ ಅಡಿಯಲ್ಲಿ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

ಮುಂದುವರೆದು, ಯಲಹಂಕ ವಲಯದ ವ್ಯಾಪ್ತಿಯಲ್ಲಿ ಬರುವ ವಾರ್ಡ್ ಸಂಖ್ಯೆ : 06 (ಥಣಿಸಂದ್ರ) ವ್ಯಾಪ್ತಿಯಲ್ಲಿನ ದಾಸರಹಳ್ಳಿ, ರಾಚೇನಹಳ್ಳಿ ಮತ್ತು ಥಣಿಸಂದ್ರ ಹಳ್ಳಿಗಳ ಅಭಿವೃದ್ಧಿಗಾಗಿ ರೂ.300.00 ಲಕ್ಷಗಳ ಮೊತ್ತಕ್ಕೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ

| ಕ್ರಮ ಸಂಖ್ಯೆ | ಪಿ.ಕೋಡ್ | ಕಾಮಗಾರಿ ಹೆಸರು | ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|

| | | | |
|---|---|---|---|
| 1 | P2654 | Providing C C Road and Improvements of Drains in Cross Roads of Dasarahalli Bande in Ward NO. 06 | 10.00 |
| 2 | P2654 | Improvements to Roads and side drains in Thayappa Layout in Ward No. 06 | 9.00 |
| 3 | P2654 | Improvements to Roads and side drains in Antony Layout behind sai baba Layout in Ward No. 06 | 7.00 |
| 4 | P2654 | Providing metalling to Cauvery nagara Main Road to Mariyannapalya Colony in Ward No. 06 | 7.00 |
| 5 | P2654 | Improvements to Roads and Drains from Chinappa's House to Harallappa's House Road in Ward No. 06 | 7.00 |
| 6 | P2654 | Improvements to Roads and Side Drain 2nd Cross and 3rd Cross in Antony Layout in Ward No. 06 | 8.00 |
| 7 | P2654 | Construction of Culverts in Mariyannapalya in Ward No. 06 | 8.00 |
| 8 | P2654 | Improvements to roads and side drains in Munikempanna Layout in Ward No. 06 | 8.00 |
| 9 | P2654 | Construction of BS Slab Drain in Maruthi Layout 2nd Corss Main Road in Ward No. 06 | 7.00 |
| 10 | P2654 | Improvements to Roads and Side drain 3nd 'B' Cross in Maruthi Layout in Ward No. 06 | 7.00 |
| 11 | P2654 | Improvements to Road at 20th'R' Cross in Ward No. 06 | 5.00 |
| 12 | P2654 | Improvements and Asphalting to Roads at Mestripalya to Rachenahalli Road in Ward No. 06 | 19.00 |
| 13 | P2654 | Improvements Roads and drains at Anjanadri Layout Main Road and Cross Roads in Ward No. 06 | 14.00 |
| 14 | P2654 | Improvements Roads and drains at Anjanadri Layout Cross Roads in Ward No. 06 | 10.00 |
| 15 | P2654 | Improvements and Asphalting to Roads and drains at BDS Layout in Ward No. 06 | 15.00 |
| 16 | P2654 | Improvements and Asphalting to Roads and drains at Shiridi Sai Rathan Layout in Ward No. 06 | 18.00 |
| 17 | P2654 | Improvements to Roads and Drains Mestri Palya in ward No.06 | 4.00 |
| 18 | P2654 | Improvements and Asphalting to Roads and Driains at Thanisandra Village in Ward No. 06 | 15.00 |
| 19 | P2654 | Providing Concrete Roads and culverts at Thanisandra village in | 15.00 |

| | | | |
|---|---|---|---|
| | | Ward No. 06 | |
| 20 | P2654 | Improvements to Roads and Driains at Amarajoythi Layout in Ward No. 06 | 10.00 |
| 21 | P2654 | Improvements to Roads and Drains at Sadiq Layout ( High Tenction Road) in Ward No. 06 | 10.00 |
| 22 | P2654 | Improvements to Roads and Drains at Fathima Layout in Ward No. 06 | 10.00 |
| 23 | P2654 | Improvements to Roads and Drains at Vidyasagara in Ward No. 06 | 12.00 |
| 24 | P2654 | Improvements to Roads and Drains at Thanisandra Narayanappa's House Road in Ward No. 06 | 5.00 |
| 25 | P2654 | Providing Concrete Roads at Sri Sampigehalli Ramanna's House Road Thanisandra Village in Ward No. 06 | 10.00 |
| | P2654 | **Water Supply Works** | |
| 26 | P2654 | Drilling of Borewell and Providing Pump and Motors and Pipeline at Rachenahalli Surrounding in Ward NO.06 | 16.50 |
| 27 | P2654 | Drilling of Borewell and Providing Pump and Motors and Pipeline at Dasarahalli Surrounding in Ward NO.06 | 17.00 |
| 28 | P2654 | Drilling of Borewell and Providing Pump and Motors and Pipeline at Thanisandra Surrounding in Ward NO.06 | 16.50 |
| | | **Total Amount** | **300.00** |

ಮೇಲ್ಕಂಡ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಹಾಗೂ ಅನುದಾನ ಬಿಡುಗಡೆ ಮಾಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಟಿಪ್ಪಣಿಯನ್ನು ಸಲ್ಲಿಸಿದೆ.

ನಿರ್ಣಯ : **ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 15.03.2013ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳಿಗೆ 2013-14ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ : 126ರ ಪಿ-2654ರಲ್ಲಿ 110 ಗ್ರಾಮಗಳಿಗೆ ವಿಶೇಷ ಅಭಿವೃದ್ಧಿ ಪ್ಯಾಕೇಜ್ ಅನುದಾನದಡಿಯಲ್ಲಿ ಚಾಲ್ತಿ ಕಾಮಗಾರಿಗಳಿಗಾಗಿ ಕಾಯ್ದಿರಿಸಿರುವ ಅನುದಾನದಲ್ಲಿ ರೂ.300.00 (ಮೂರು ನೂರು) ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವುದೆಂದು ಹಾಗೂ ವಾರ್ಡಿನ ಸದಸ್ಯರ ಕೋರಿಕೆಯಂತೆ ಕಾಮಗಾರಿಗಳು ತುರ್ತಾಗಿದ್ದು, ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ನಿರ್ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *07]. ವಿಷಯದ ಸಂಖ್ಯೆ :-ತೆಆಸ್ಥಾಸ/264/2012-13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 14.03.2013 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಬೆಂಗಳೂರು ದಕ್ಷಿಣ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ನಂ 194ರ ಪಿಲ್ಲಗಾನಹಳ್ಳಿ ಗ್ರಾಮವು 2007ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರ್ಪಡೆಯಾದ 110 ಹಳ್ಳಿಗಳ ಪೈಕಿ ಒಂದಾಗಿರುತ್ತದೆ. 2012-13ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯವ್ಯಯದಲ್ಲಿ ಹೊಸದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರ್ಪಡೆಯಾದ 110 ಹಳ್ಳಿಗಳ ಅಭಿವೃದ್ಧಿಗೆ 135.00 ಕೋಟಿಗಳ ವಿಶೇಷ ಅನುದಾನವನ್ನು ಕಲ್ಪಿಸಲಾಗಿದೆ. (ಆಯವ್ಯಯ ಪುಸ್ತಕದ ಪಿಕೋಡ್ ಸಂಖ್ಯೆ: ಞ2654, ಚಿಡಜ ಓಂ 131) ಈ ವಿಶೇಷ ಅನುದಾನದಲ್ಲಿ ಪಿಲ್ಲಗಾನಹಳ್ಳಿ ಗ್ರಾಮದ ಮೂಲಭೂತ ಸೌಕರ್ಯಗಳ ಅಭಿವೃದ್ದಿಗೆ ರೂ 99.94 ಲಕ್ಷಗಳ 5 ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ವಾರ್ಡ್ ನಂ 194ರ ಪಾಲಿಕೆ ಸದಸ್ಯರಾದ ಶ್ರೀಮತಿ.ಎಸ್.ಕೆ.ಪುಷ್ಪಪ್ರಭಾಕರ್ ರವರು ಕೋರಿರುತ್ತಾರೆ. ಪಿಲ್ಲಗಾನಹಳ್ಳಿ ಗ್ರಾಮವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರ್ಪಡೆಯಾಗುವ ಮೊದಲು ಗ್ರಾಮ ಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಸೇರಿದ್ದು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದೆ. ಆದ್ದರಿಂದ ಪಾಲಿಕೆ ಸದಸ್ಯರು ಕೋರಿರುವ 5 ಕಾಮಗಾರಿಗಳಿಗೆ ರೂ 99.94 ಲಕ್ಷಗಳ ಅನುದಾನದ ಅವಶ್ಯಕತೆ ಇರುತ್ತದೆ. 2012–13ನೇ ಸಾಲಿನ ಆಯವ್ಯಯದಲ್ಲಿ 110 ಹಳ್ಳಿಗಳಿಗೆ ಮೀಸಲಿಟ್ಟಿರುವ ವಿಶೇಷ ಅನುದಾನ ರೂ 13500.00 ಲಕ್ಷಗಳಲ್ಲಿ ಪಿಳ್ಳಗಾನಹಳ್ಳಿ ಗ್ರಾಮದ 5 ಕಾಮಗಾರಿಗಳಿಗೆ ತಗಲುವ ವೆಚ್ಚ ರೂ 99.94 ಲಕ್ಷಗಳಿಗೆ ಪ್ರತ್ಯೇಕ ಕಾಮಗಾರಿ ಸಂಕೇತದೊಂದಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ನೀಡಲು ಅಪರ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಪ್ರಸ್ತಾವನೆಗೆ ಈ ಕಡತದ ಕಂಡಿಕೆ (06) ರಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿಯೊಂದಿಗೆ ಮಂಡಿಸುವಂತೆ ಆದೇಶಿಸಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ವಾರ್ಡ್ ನಂ 194ರ ಪಿಳ್ಳಗಾನಹಳ್ಳಿ ಗ್ರಾಮದ ಈ ಕೆಳಕಂಡ ಕಾಮಗಾರಿಗಳಿಗೆ 2012–13ನೇ ಸಾಲಿನ 110 ಹಳ್ಳಿಗಳಿಗೆ ಮೀಸಲಿಡಲಾದ ಅನುದಾನದಲ್ಲಿ ರೂ 99.94 ಲಕ್ಷಗಳ 5 ಕಾಮಗಾರಿಗಳಿಗೆ ಅನುದಾನವನ್ನು ಒದಗಿಸಲು ಕೋರಿ ಟಿಪ್ಪಣಿಯನ್ನು ತಯಾರಿಸಿ ಸಲ್ಲಿಸಿದೆ.

| **ಖಟ ಓಂ** | **ಓಚಿಟಜ ಡಿ ತಿಡಿಞ** | **ಇಣಟಚಿಣಜ ಅಥಾ ಟಿ ಟಚಿಞು** |
|---|---|---|
| 1 | Improvements to Drains, Culverts and Asphalting to the Roads and other works at Pavamana nagara pillaganahalli in ward No 194 | 19.99 |
| 2 | Improvements to Drains, Culverts and Asphalting to the Roads and other works at Maruthi layout pillaganahalli in ward No 194 | 19.99 |
| 3 | Improvements to Drains, Culverts and Asphalting to the Roads and other works at Krishnappa layout pillaganahalli in ward No 194 | 19.99 |
| 4 | Providing Concrete road and other Improvements works at pillaganahalli at ward No 194 | 19.98 |
| 5 | Providing UGD line, Metalling and Asphalting to the roads and other Improvement works at pillaganahalli at ward No 194 | 19.99 |
| | **Total** | **99.94** |

ನಿರ್ಣಯ : **ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 14.03.2013ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳಿಗೆ 2013–14ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ : 126ರ ಪಿ–2654ರಲ್ಲಿ 110 ಗ್ರಾಮಗಳಿಗೆ ವಿಶೇಷ ಅಭಿವೃದ್ಧಿ ಪ್ಯಾಕೇಜ್ ಅನುದಾನದಡಿಯಲ್ಲಿ ಚಾಲ್ತಿ ಕಾಮಗಾರಿಗಳಿಗಾಗಿ ಕಾಯ್ದಿರಿಸಿರುವ ಅನುದಾನದಲ್ಲಿ ರೂ.99.94 (ತೊಂಭತ್ತೊಂಭತ್ತು ಲಕ್ಷ ತೊಂಭತ್ನಾಲ್ಕು ಸಾವಿರ ಮಾತ್ರ) ಗಳನ್ನು ಬಿಡುಗಡೆ ಮಾಡುವುದೆಂದು ಹಾಗೂ ವಾರ್ಡಿನ ಸದಸ್ಯರ ಕೋರಿಕೆಯಂತೆ ಕಾಮಗಾರಿಗಳು ತುರ್ತಾಗಿದ್ದು, ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ**

ನಿರ್ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.

## *08]. ವಿಷಯದ ಸಂಖ್ಯೆ :–ತೆಆಸ್ಥಾಸ/265/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 14.03.2013 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಬೆಂಗಳೂರು ದಕ್ಷಿಣ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ನಂ 194ರ ಗೊಟ್ಟಿಗೆರೆ ಗ್ರಾಮವು 2007ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರ್ಪಡೆಯಾದ 110 ಹಳ್ಳಿಗಳ ಪೈಕಿ ಒಂದಾಗಿರುತ್ತದೆ. 2012–13ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯವ್ಯಯದಲ್ಲಿ ಹೊಸದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರ್ಪಡೆಯಾದ 110 ಹಳ್ಳಿಗಳ ಅಭಿವೃದ್ಧಿಗೆ 135.00 ಕೋಟಿಗಳ ವಿಶೇಷ ಅನುದಾನವನ್ನು ಕಲ್ಪಿಸಲಾಗಿದೆ. (ಆಯವ್ಯಯ ಪುಸ್ತಕದ ಪಿಕೋಡ್ ಸಂಖ್ಯೆ: ಈ654, ಜಿಜ ಓಂ 131) ಈ ವಿಶೇಷ ಅನುದಾನದಲ್ಲಿ ಗೊಟ್ಟಿಗೆರೆ ಗ್ರಾಮದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ರೂ 99.94 ಲಕ್ಷಗಳ 5 ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ವಾರ್ಡ್ ನಂ 194ರ ಪಾಲಿಕೆ ಸದಸ್ಯರಾದ ಶ್ರೀಮತಿ.ಎಸ್.ಕೆ.ಪುಷ್ಪಪ್ರಭಾಕರ್ ರವರು ಕೋರಿರುತ್ತಾರೆ. ಗೊಟ್ಟಿಗೆರೆ ಗ್ರಾಮವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರ್ಪಡೆಯಾಗುವ ಮೊದಲು ಗ್ರಾಮ ಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಸೇರಿದ್ದು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದೆ. ಆದ್ದರಿಂದ ಪಾಲಿಕೆ ಸದಸ್ಯರು ಕೋರಿರುವ 5 ಕಾಮಗಾರಿಗಳಿಗೆ ರೂ 99.94 ಲಕ್ಷಗಳ ಅನುದಾನದ ಅವಶ್ಯಕತೆ ಇರುತ್ತದೆ. 2012–13ನೇ ಸಾಲಿನ ಆಯವ್ಯಯದಲ್ಲಿ 110 ಹಳ್ಳಿಗಳಿಗೆ ಮೀಸಲಿಟ್ಟಿರುವ ವಿಶೇಷ ಅನುದಾನ ರೂ 13500.00 ಲಕ್ಷಗಳಲ್ಲಿ ಗೊಟ್ಟಿಗೆರೆ ಗ್ರಾಮದ 5 ಕಾಮಗಾರಿಗಳಿಗೆ ತಗಲುವ ವೆಚ್ಚ ರೂ 99.94 ಲಕ್ಷಗಳಿಗೆ ಪ್ರತ್ಯೇಕ ಕಾಮಗಾರಿ ಸಂಕೇತದೊಂದಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ನೀಡಲು ಅಪರ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಪ್ರಸ್ತಾವನೆಗೆ ಈ ಕಡತದ ಕಂಡಿಕೆ (06) ರಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿಯೊಂದಿಗೆ ಮಂಡಿಸುವಂತೆ ಆದೇಶಿಸಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ವಾರ್ಡ್ ನಂ 194ರ ಗೊಟ್ಟಿಗೆರೆ ಗ್ರಾಮದ ಈ ಕೆಳಕಂಡ ಕಾಮಗಾರಿಗಳಿಗೆ 2012–13ನೇ ಸಾಲಿನ 110 ಹಳ್ಳಿಗಳಿಗೆ ಮೀಸಲಿಡಲಾದ ಅನುದಾನದಲ್ಲಿ ರೂ 99.94 ಲಕ್ಷಗಳ 5 ಕಾಮಗಾರಿಗಳಿಗೆ ಅನುದಾನವನ್ನು ಒದಗಿಸಲು ಕೋರಿ ಟಿಪ್ಪಣಿಯನ್ನು ತಯಾರಿಸಿ ಸಲ್ಲಿಸಿದೆ.

| ಖಟ ಓಂ | ಓಚಿಟಜ ಜಿ ತಿಡಿಇ | ಇಣಟಚಿಣಜ ಅಥಾ ಟ ಟಚಿಇು |
|---|---|---|
| 1 | Providing Metalling and Asphalting to the roads and other Improvement works at Gundappa layout in gottigere ward No 194 | 19.98 |
| 2 | Providing Metalling and Asphalting to the roads and other Improvement works at 4th 5th and 6th cross roads in gottigere ward No 194 | 19.99 |
| 3 | Providing Metalling and Asphalting to the roads and other Improvement works at South Avenue cross roads in gottigere ward No 194 | 19.99 |
| 4 | Providing Metalling and Asphalting to the roads and other Improvement works at Avenue main roads in gottigere ward No 194 | 19.99 |
| 5 | Providing UGD line at Shamanna layout at gottigere in ward No 194 | 19.99 |
| | **Total** | **99.94** |

ನಿರ್ಣಯ : ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 14.03.2013ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳಿಗೆ 2013–14ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ :

**126ರ ಪಿ-2654ರಲ್ಲಿ 110 ಗ್ರಾಮಗಳಿಗೆ ವಿಶೇಷ ಅಭಿವೃದ್ಧಿ ಪ್ಯಾಕೇಜ್ ಅನುದಾನದಡಿಯಲ್ಲಿ ಚಾಲ್ತಿ ಕಾಮಗಾರಿಗಳಿಗಾಗಿ ಕಾಯ್ದಿರಿಸಿರುವ ಅನುದಾನದಲ್ಲಿ ರೂ.99.94 (ತೊಂಭತ್ತೊಂಭತ್ತು ಲಕ್ಷ ತೊಂಭತ್ತಾಲ್ಕು ಸಾವಿರ ಮಾತ್ರ) ಗಳನ್ನು ಬಿಡುಗಡೆ ಮಾಡುವುದೆಂದು ಹಾಗೂ ವಾರ್ಡಿನ ಸದಸ್ಯರ ಕೋರಿಕೆಯಂತೆ ಕಾಮಗಾರಿಗಳು ತುರ್ತಾಗಿದ್ದು, ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ನಿರ್ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *09]. ವಿಷಯದ ಸಂಖ್ಯೆ :-ತೆಆಸ್ಥಾಸ/266/2012-13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/85/10-11, ದಿನಾಂಕ : 18.01.2013ರಲ್ಲಿ ವಿವರಿಸಿರುವಂತೆ, **ಬೃಹತ್** ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್-93, ಮಿಲ್ಲರ್ ಟ್ಯಾಂಕ್ ಬೆಡ್ ಪ್ರದೇಶದ ಪ್ಲಾಟ್ ನಂ.16 ಹೆಚ್ ರಲ್ಲಿ 125ಥ125+130/2 ಅಂದರೆ 15937.5 ಚದರ ಅಡಿ ವಿಸ್ತೀರ್ಣದ ಪ್ರದೇಶವನ್ನು ಸರ್ಕಾರಿ ಆದೇಶ ಸಂಖ್ಯೆ : ಹೆಚ್ಎಂಎ 295 ಎಂಎನ್ಜಿ 77, ದಿನಾಂಕ:24-02-1978 ರಲ್ಲಿ ವಾರ್ಷಿಕ ಗುತ್ತಿಗೆ ರೂ.100/- ಕ್ಕೆ 30 ವರ್ಷಗಳ ಅವಧಿಗೆ ಕರ್ನಾಟಕ ಮೆಡಿಕಲ್ ಕೌನ್ಸಿಲ್‌ಗೆ ನೀಡಲಾಗಿರುತ್ತದೆ. ಗುತ್ತಿಗೆ ಕರಾರನ್ನು ದಿನಾಂಕ:23-11-1979 ರಲ್ಲಿ ಮಾಡಿ ಇದರಲ್ಲಿ ಗುತ್ತಿಗೆ ಮೊತ್ತವನ್ನು ಆಡಳಿತಗಾರರ ಆದೇಶದಂತೆ ವಾರ್ಷಿಕ ರೂ.500/-ರಂತೆ ಪರಿಷ್ಕರಿಸಲಾಗಿರುತ್ತದೆ. ಈ ಗುತ್ತಿಗೆ ಅವಧಿ ದಿನಾಂಕ:22-11-2009ಕ್ಕೆ ಮುಕ್ತಾಯಗೊಂಡಿರುತ್ತದೆ. ನಂತರ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-4-2012ರ ನಿರ್ಣಯದ ಅನುಸಾರ, ಸದರಿ ಸಂಸ್ಥೆಯ ಗುತ್ತಿಗೆ ಅವಧಿಯನ್ನು ದಿನಾಂಕ:22-11-2009 ರಿಂದ ಮೂರು ವರ್ಷದ ಅವಧಿಗೆ ವಾರ್ಷಿಕ 25,000/- ನಿಗಧಿಪಡಿಸಿ ಮುಂದುವರಿಸಿದ್ದು, ದಿ:21-11-2012ಕ್ಕೆ ಅವಧಿಯು ಮುಕ್ತಾಯಗೊಂಡಿದೆ. ಈ ಸಂಸ್ಥೆಯು 1961ರ ಕರ್ನಾಟಕ ಕಾಯ್ದೆ ಸಂಖ್ಯೆ:34 ರಂತೆ ಸ್ಥಾಪಿತಗೊಂಡ ಶಾಸನ ಬದ್ಧ ಪ್ರಾಧಿಕಾರವಾಗಿರುತ್ತದೆ.

ವಲಯಾಧಿಕಾರಿಗಳು ವರದಿಯಲ್ಲಿ ಮೇಲ್ಕಂಡ ನಿವೇಶನದಲ್ಲಿ ಸಂಸ್ಥೆಯವರು 2 ಅಂತಸ್ತಿನ ಕಟ್ಟಡ ನಿರ್ಮಾಣ ಮಾಡಿದ್ದು, ಸಂಸ್ಥೆಯ ಕಾರ್ಯಕಲಾಪಗಳಿಗಾಗಿ ಶಾಶ್ವತವಾಗಿ ಇದರ ಅವಶ್ಯಕತೆ ಇರುವುದರಿಂದ ಇದು ಕರ್ನಾಟಕದ ಒಂದು ಶಾಸನಬದ್ಧ ಸಂಸ್ಥೆಯಾಗಿರುವುದರಿಂದ ಗುತ್ತಿಗೆಯನ್ನು 30 ವರ್ಷಗಳ ಅವಧಿಗೆ ವಿಸ್ತರಿಸಲು ಕೋರಿರುತ್ತಾರೆ. ದಿನಾಂಕ:22-11-2009 ರಿಂದ 2012ರ ವರೆಗೆ ಬಾಕಿಯಿದ್ದ ಗುತ್ತಿಗೆ ಮೊತ್ತವನ್ನು ಪಾವತಿಸಿರುತ್ತಾರೆ. ಆದುದರಿಂದ, ಗುತ್ತಿಗೆ ನವೀಕರಣಕ್ಕಾಗಿ ಕಡತ ಪ್ರಸ್ತಾಪಿಸಿರುತ್ತಾರೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ಸರ್ಕಾರದ ಮಾರ್ಗಸೂಚಿಯ ದಿನಾಂಕ:21-09-2011 ರಂತೆ ಚದರ ಅಡಿ ಒಂದಕ್ಕೆ 4500/- ಗಳಿದ್ದು, 15937.5 ಚದರ ಅಡಿಗಳಾಗಿದ್ದು, ನಿಗದಿಪಡಿಸಿರುವ ದರದಂತೆ 4500ಥ15937.5=7,17,18,750/- ರೂ ಗಳಾಗುತ್ತದೆ. ಶೇ 10% ರಷ್ಟು ವಾರ್ಷಿಕ ಗುತ್ತಿಗೆ ಮೊತ್ತ 71,71,875/- ರೂ ಗಳಾಗಲಿದ್ದು, ಮಾಸಿಕ ಗುತ್ತಿಗೆ ದರ ರೂ.5,97,660/-ಗಳಾಗುತ್ತದೆ. ಪಾಲಿಕೆಯ ಸುತ್ತೋಲೆ 01-03-2002 ರ ಅನುಸಾರ ಮಾರುಕಟ್ಟೆ ಬೆಲೆಯ 10% ರಷ್ಟು ಗುತ್ತಿಗೆ ಬೆಲೆಯನ್ನು ನಿಗಧಿಪಡಿಸಲು ಅವಕಾಶವಿದ್ದು, ಶೇ 100% ರಷ್ಟು ಸಮಾಜ ಸೇವೆಯಲ್ಲಿರುವ ಸಂಸ್ಥೆಗಳಿಗೆ ರಿಯಾಯಿತಿ ನೀಡುವ ಅವಕಾಶವಿರುತ್ತದೆ.

ಆದುದರಿಂದ, ಈ ಸಂಸ್ಥೆಗೆ ಗುತ್ತಿಗೆ ನವೀಕರಿಸುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ **ಆಯುಕ್ತರ ದಿನಾಂಕ : 18.01.2013ರ ಟಿಪ್ಪಣಿಯನ್ನು ಮಾರ್ಪಡಿಸಿ, ಸದರಿ ಸ್ವತ್ತಿನ ಗುತ್ತಿಗೆ ಅವಧಿಯನ್ನು ಹತ್ತು (10) ವರ್ಷಗಳಿಗೆ ನವೀಕರಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 11.03.2013ರ ನಿರ್ಣಯ.**

**ನಿರ್ಣಯ : ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿ.11.03.2013ರ ನಿರ್ಣಯವನ್ನು ಮಾರ್ಪಡಿಸುತ್ತಾ, ಈ ಸಂಸ್ಥೆಯು ಒಂದು ಶಾಸನ ಬದ್ಧ ಸಂಸ್ಥೆ ಆಗಿರುವುದರಿಂದ, ಗುತ್ತಿಗೆಯನ್ನು ಮೂವತ್ತು ವರ್ಷಗಳ ಅವಧಿಗೆ ನವೀಕರಿಸಲು ಸಮಿತಿಯು ತೀರ್ಮಾನಿಸಿತು.**

## *10]. ವಿಷಯದ ಸಂಖ್ಯೆ :-ತೆಆಸ್ಥಾಸ/267/2012-13*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಎ3(4)ಪಿಆರ್/22/12-13, ದಿನಾಂಕ : 25.02.2013ರಲ್ಲಿ ವಿವರಿಸಿರುವಂತೆ, ವಾರ್ಡ್-154, ನಂ : 14, 15ನೇ ಅಡ್ಡರಸ್ತೆ, ಅಶೋಕನಗರದಲ್ಲಿನ ಶ್ರೀಮತಿ. ಎನ್.ಎ.ಮಾಲಿನಿ ರವರ ಸ್ವತ್ತಿಗೆ ಹೊಂದಿಕೊಂಡಿರುವ ಉತ್ತರ ಭಾಗದಲ್ಲಿನ 30*4 ಅಡಿಗಳ ಮಾರ್ಜಿನಲ್ ಜಾಗವನ್ನು ಕ್ರಯಕ್ಕೆ ನೀಡಲು ಕೋರಿರುತ್ತಾರೆ.

ಮನವಿದಾರರಿಗೆ ಜಾಗವನ್ನು ಕ್ರಯಕ್ಕೆ ನೀಡಿದಲ್ಲಿ, ರಸ್ತೆಯ ಅಗಲ ಕಡಿಮೆಯಾಗುವುದಾಗಲೀ ಅಥವಾ ಸಾರ್ವಜನಿಕರಿಗೆ ಓಡಾಟಕ್ಕೆ ತೊಂದರೆಯಾಗುವುದಿಲ್ಲವೆಂದು ವರದಿ ಮಾಡಿದ್ದು, ಪುನಃ ಅಪರ ಆಯುಕ್ತರು (ದಕ್ಷಿಣ)ರವರಿಗೆ ಖುದ್ದು ಪರಿಶೀಲಿಸಿ ವರದಿ ನೀಡಲು ಸೂಚಿಸಲಾಗಿ ಸ್ಥಳ ಪರಿಶೀಲನೆ ನಡೆಸಿ ರಸ್ತೆ ವಿಸ್ತೀರ್ಣ, ವಿಲೇಜ್ ನಕ್ಷೆಯೊಂದಿಗೆ ಸಲ್ಲಿಸುವಂತೆ ಅಧೀನ ಅಧಿಕಾರಿಗಳಿಗೆ ಸೂಚಿಸಿರುವ ಮೇರೆಗೆ ಕಾಮಗಾರಿ ಇಲಾಖೆಯವರು ಸದರಿ ಬಡಾವಣೆಯು ರೆವಿನ್ಯೂ ಗ್ರಾಮದ ಬಡಾವಣೆಯಾಗಿದ್ದು, ಅನುಮೋದಿತ ನಕ್ಷೆ ದೊರೆತಿಲ್ಲವೆಂದು ಹಾಗೂ ರಸ್ತೆ ಅಳತೆ ನಕ್ಷೆ ತಯಾರಿಸಿ ಮನವಿದಾರರಿಗೆ ಜಾಗ ನೀಡಿದಲ್ಲಿ ರಸ್ತೆಯ ಪ್ರಾರಂಭಿಕ ಹಾಗೂ ಅಂತ್ಯದಲ್ಲಿನ ಅಗಲಕ್ಕಿಂತಲೂ ಕಡಿಮೆಯಾಗುವುದಿಲ್ಲವೆಂದು ವರದಿ ನೀಡಿರುತ್ತಾರೆ.

ಕ್ರಯಕ್ಕೆ ನೀಡಲು ಕೋರಿರುವ ಮಾರ್ಜಿನಲ್ ಜಾಗದ ವಿಸ್ತೀರ್ಣ 30*4 ಅಡಿಗಳಿದ್ದು, ಒಟ್ಟು 120 ಚದರಡಿಗಳಾಗಿದ್ದು, ಸರ್ಕಾರದ ದಿನಾಂಕ : 26.09.2011ರ ಮಾರ್ಗಸೂಚಿ ದರದಂತೆ ಚದರ ಅಡಿ 1ಕ್ಕೆ 2400/- ರೂ.ಗಳಿದ್ದು, 120 ಚದರಡಿಗಳಿಗೆ ಸ್ವತ್ತಿನ ಮೌಲ್ಯ 2,88,000/- ರೂ.ಗಳಾಗುತ್ತದೆ. ಆದರೆ, ಸರ್ಕಾರದ ಆದೇಶ ಸಂಖ್ಯೆ : ನಅಇ/129/ಟಿಎಂಪಿ/2002, ಬೆಂಗಳೂರು ದಿನಾಂಕ : 02.06.2003ರ ಮಾರ್ಗಸೂಚಿ ಕ್ರಮಸಂಖ್ಯೆ ರನ್ವಯ ಸಾರ್ವಜನಿಕ ಹರಾಜು ಮೂಲಕವೇ ನೀಡುವುದು ಎಂದಿದೆ.

ಆದ್ದರಿಂದ, ಪ್ರಸ್ತಾವಿತ ಮಾರ್ಜಿನಲ್ ಜಾಗವನ್ನು ಸಾರ್ವಜನಿಕ ಹಾರಾಜು ಮೂಲಕ ಕ್ರಯಕ್ಕೆ ನೀಡಬೇಕಾದಲ್ಲಿ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬಿಬಿಎಂಪಿ ಸಭೆ ಮುಖಾಂತರ ಸರ್ಕಾರದ ಅನುಮೋದನೆ ಪಡೆಯಬೇಕಾಗಿದ್ದು, ಸದರಿ ಸ್ವತ್ತನ್ನು ಸಾರ್ವಜನಿಕ ಹರಾಜು ಮೂಲಕ ನೀಡಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ ಆಯುಕ್ತರ ದಿನಾಂಕ : 25.02.2013ರ ಟಿಪ್ಪಣಿಯನ್ನು ಒಪ್ಪಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಆಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 11.03.2013ರ ನಿರ್ಣಯ.

**ನಿರ್ಣಯ :** **ಮಾನ್ಯ ಆಯುಕ್ತರ ದಿ.25.02.2013ರ ಟಿಪ್ಪಣಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿ.11.03.2013ರ ನಿರ್ಣಯವನ್ನು ಮಾರ್ಪಡಿಸುತ್ತಾ, ಸದರಿ ಸ್ವತ್ತನ್ನು ಅರ್ಜಿದಾರರ ಮನೆಗೆ ಹೊಂದಿಕೊಂಡಿರುವುದರಿಂದ, ಈ ಸ್ವತ್ತನ್ನು ಸಾರ್ವಜನಿಕ ಹರಾಜಿನ ಮೂಲಕ ಹಂಚಿಕೆ ಮಾಡುವುದರ ಬದಲಾಗಿ ಅರ್ಜಿದಾರರಿಗೆ ಸರ್ಕಾರದ ಮಾರ್ಗಸೂಚಿ ದರದಲ್ಲಿ ನೀಡಲು ಸಮಿತಿಯು ತೀರ್ಮಾನಿಸಿತು.**

## *11]. ವಿಷಯದ ಸಂಖ್ಯೆ :-ತೆಆಸ್ಥಾಸ/01/2013-14*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಬಿ12(4)ಪಿಆರ್/337/12-13, ದಿನಾಂಕ : 18.03.2013ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಎಲ್ಲಾ ಗ್ಯಾಂಗ್‌ಮೆನ್‌ಗಳು, ಸ್ಯಾನಿಟರಿ ದಫೇದಾರ್, ನೀರು ಸರಬರಾಜು ಸಹಾಯಕರು, ಸ್ವಚ್ಛತಾ ಲಾರಿ ಚಾಲಕರು ಮತ್ತು ಕ್ಲೀನರ್‌ಗಳು, ಶವ ಸಾಗಾಣಿಕೆ / ದನ ಹಿಡಿಯುವ / ನಾಯಿ ಹಿಡಿಯುವ, ಮುಖ್ಯ / ಉಪ / ಆರೋಗ್ಯಾಧಿಕಾರಿ / ಆರೋಗ್ಯ ವೈದ್ಯಾಧಿಕಾರಿರವರ ವಾಹನ ಚಾಲಕರು, ದನ ಹಿಡಿಯುವ ನೌಕರರು, ನಾಯಿ ಹಿಡಿಯುವ ನೌಕರರ ಆಂಬ್ಯುಲೆನ್ಸ್ ಸಹಾಯಕರು, ಕೀಟ ಸಂಗ್ರಹಣೆಗಾರರು ಇವರುಗಳಿಗೆ ಸಾರ್ವತ್ರಿಕ ರಜಾ ದಿನಗಳಲ್ಲಿ ಮತ್ತು ಹಬ್ಬ ಹರಿದಿನಗಳಲ್ಲಿ ಕಾರ್ಯನಿರ್ವಹಿಸಿರುವುದನ್ನು ಪರಿಗಣಿಸಿ 15 ದಿನಗಳ ವಿಶೇಷ ನಗದೀಕರಣ ಸೌಲಭ್ಯವನ್ನು ಪ್ರತಿ ವರ್ಷವೂ ಪಡೆಯಲು ಆದೇಶಿಸಲಾಗಿದೆ.

ಅದರಂತೆ, 2012-13ನೇ ಸಾಲಿಗೆ 15 ದಿನಗಳ ವಿಶೇಷ ರಜೆ ನಗದೀಕರಣ ಸೌಲಭ್ಯವನ್ನು ಮಂಜೂರು ಮಾಡುವ ಬಗ್ಗೆ ಮುಖ್ಯ ಲೆಕ್ಕಾಧಿಕಾರಿಗಳ ಅಭಿಪ್ರಾಯ ಕೋರಲಾಗಿ, ಮುಖ್ಯ ಲೆಕ್ಕಾಧಿಕಾರಿಗಳ ವರದಿ ದಿನಾಂಕ : 04.03.2013 ರಲ್ಲಿ ನೀಡಿರುವ ಅಭಿಪ್ರಾಯದಂತೆ ಪ್ರಸ್ತುತ ಆರ್ಥಿಕ ವರ್ಷ 2012-13ಕ್ಕೆ ಅನ್ವಯಿಸುವಂತೆ ಸರ್ಕಾರದ ಆದೇಶದನ್ವಯ ಮೇಲ್ಕಂಡ ಪಾಲಿಕೆಯ ನೌಕರರುಗಳಿಗೆ 15 ದಿನಗಳ ವಿಶೇಷ ರಜೆ ನಗದೀಕರಣ ಸೌಲಭ್ಯವನ್ನು ಮಂಜೂರು ಮಾಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ : ಮಾನ್ಯ ಆಯುಕ್ತರ ದಿ.18.03.2013ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## ***12]. ವಿಷಯದ ಸಂಖ್ಯೆ :-ತೆಆಸ್ಥಾಸ/02/2012-13***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 18.03.2013ರಲ್ಲಿ ವಿವರಿಸಿರುವಂತೆ, ಉಪ ಅರಣ್ಯ ಸಂರಕ್ಷಣಾದಿಕಾರಿಗಳು, ಅರಣ್ಯ ಘಟಕ, ಬೆಂಗಳೂರು ಇವರ ದೈನಂದಿನ ಕೆಲಸಗಳ ನಿರ್ವಹಣೆಗಾಗಿ ಹೊರಗುತ್ತಿಗೆ ಆಧಾರದ ಮೇಲೆ ಅರಣ್ಯ ಕಾಮಗಾರಿಗಳ ಅನುಭವ ಇರುವ ಒಬ್ಬ ಸಲಹೆಗಾರರ ಸೇವೆ ಅತ್ಯಂತ ಅವಶ್ಯಕವಾಗಿರುತ್ತದೆ.

ಅರಣ್ಯ ಘಟಕವು ಕಳೆದ 5 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು ಎಲ್ಲಾ 8 ವಲಯಗಳಲ್ಲಿ ಅರಣ್ಯೀಕರಣ ಕಾಮಗಾರಿಗಳು ನಿರ್ವಹಣೆಯಾಗುತ್ತಿರುತ್ತದೆ ಇದಲ್ಲದೆ ಎಲ್ಲಾ ವಲಯಗಳಲ್ಲಿ ಮರಗಳ ವ್ಯವಸ್ಥಿತ ಕಾರ್ಯ ನಿರ್ವಹಣೆಯೂ ಸಹಾ ಆಗುತ್ತಿರುತ್ತದೆ.

ಈ ಮುನ್ನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಬೆಂಗಳೂರು ಉತ್ತರ ಮತ್ತು ದಕ್ಷಿಣ ವ್ಯಾಪ್ತಿಯಲ್ಲಿ ಎರಡು ವಿಭಗಗಳಿದ್ದುಮ ಪ್ರಸ್ತುತ ಎರಡೂ ವಿಭಾಗಗಳಿಗೂ ಒಬ್ಬರೇ ಅರಣ್ಯ ಸಂರಕ್ಷಣಾದಿಕಾರಿಗಳು ಇರುತ್ತಾರೆ, ಆದ್ದರಿಂದ ವಿಭಾಗ ಮಟ್ಟದ ಕಾರ್ಯ ವ್ಯಾಪ್ತಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 8 ವಲಯಗಳೀಗೆ ಒಳಪಡುತ್ತದೆ. ಈ ಕಾರಣ ಅರಣ್ಯೀಕರಣ ಕಾಮಗಾರಿಗಳ ಕಛೇರಿ ಕಾರ್ಯ ನಿರ್ವಹಣೆಯ ಅನುಭವ ನೊಂದಿರುವ ಒಬ್ಬ ಸಲಹೆಗಾರರ ಅವಶ್ಯಕತೆ ಇರುತ್ತದೆ.

ಈ ಕಾರಣ ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಪೂರ್ಣ ಪ್ರಮಾಣದ ಸೇವೆ ಸಲ್ಲಿಸಿ ಅನುಭವ ಹೊಂದಿರುವವರನ್ನು ಸಲಹೆಗಾರರನ್ನಾಗಿ ಪಡೆದು ವಿಭಾಗದ ಕಾಮಗಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುವತ್ತ ಕ್ರಮ ತೆಗೆದುಕೊಳ್ಳುವುದು ಅತ್ಯಂತ ಅಗತ್ಯವಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಶೇಷಗಿರಿ ರಾವ್ ನಿವೃತ್ತ ಅಧೀಕ್ಷಕರು, ಇವರನ್ನು ಉಪ ಅರಣ್ಯ ಸಂರಕ್ಷಣಾಧಿಕರಿ ಯವರ ಕಛೇರಿಯಲ್ಲಿ ಸಲಲಲಹೆಗಾರರಾಗಿ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಾಹೆಯಾನ ರೂ. 20,000-00 (ರೂ. ಇಪ್ಪತ್ತು ಸಾವಿರ ಮಾತ್ರ) ಗಳ ಸಂಚಿತ ವೇತನದ ಮೇಲೆ ನಿಯೋಜನೆ ಮಾಡಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**-ಮುಂದೂಡಿದೆ-**

## ***13]. ವಿಷಯದ ಸಂಖ್ಯೆ :-ತೆಆಸ್ಥಾಸ/03/2012-13***

ಆಯುಕ್ತರ ಟಿಪ್ಪಣಿ ದಿನಾಂಕ : 20.03.2013ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ದೈನಂದಿನ ಕೆಲಸ ಕಾರ್ಯಗಳಿಗೆ ವಾಹನಗಳ ಅವಶ್ಯಕತೆ ಇದ್ದು, ಪಾಲಿಕೆಯಲ್ಲಿ ಹೆಚ್ಚಿನ ಸಂಖ್ಯೆಯ ವಾಹನಗಳು ಲಭ್ಯವಿಲ್ಲದ ಪ್ರಯುಕ್ತ, ಕೇಂದ್ರ/ಪೂರ್ವ/ಪಶ್ಚಿಮ/ದಕ್ಷಿಣ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಪ್ಯಾಕೇಜ್-1 ಟೆಂಡರ್‌ನಲ್ಲಿ ಪ್ರತಿ ತಿಂಗಳಿಗೆ 2000 ಕಿ.ಮೀ ಅಥವಾ 300 ಗಂಟೆಗಳ ಅವಧಿಗೆ ಟಾಟಾ ಇಂಡಿಕಾ ನಾನ್ ಎ.ಸಿ 170 ವಾಹನಗಳು ಮತ್ತು ಟಾಟಾ ಇಂಡಿಕಾ ಎ.ಸಿ 10 ವಾಣಿಜ್ಯ ಬಳಕೆಯ ಲಘು ವಾಹನಗಳನ್ನು ಒದಗಿಸಲು ಹಾಗೂ ಕೇಂದ್ರ/ಬೊಮ್ಮನಹಳ್ಳಿ/ ದಾಸರಹಳ್ಳಿ/ ಮಹದೇವಪುರ/ ಆರ್.ಆರ್.ನಗರ /ಯಲಹಂಕ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಪ್ಯಾಕೇಜ್-2 ಅಡಿಯಲ್ಲಿ ಪ್ರತಿ ತಿಂಗಳಿಗೆ 2500 ಕಿ.ಮೀ ಅಥವಾ 315 ಗಂಟೆಗಳ ಅವಧಿಗೆ ಟಾಟಾ ಇಂಡಿಕಾ ನಾನ್ ಎ.ಸಿ 180 ವಾಹನಗಳು ಮತ್ತು ಟಾಟಾ ಇಂಡಿಕಾ ಎ.ಸಿ 10 ವಾಣಿಜ್ಯ ಬಳಕೆಯ ಲಘು ವಾಹನಗಳನ್ನು ಒದಗಿಸಲು ಇ-ಪ್ರೊಕೊರ್‌ಮೆಂಟ್ ಅಡಿಯಲ್ಲಿ ಟೆಂಡರ್

ಅಹ್ವಾನಿಸಲಾಗಿದ್ದು ಸದರಿ ಟೆಂಡರ್ ಪ್ರಕಟಣೆಯನ್ನು ಪ್ರಜಾವಾಣಿ (ಕನ್ನಡ) ಹಾಗೂ ಟೈಂಸ್ ಆಫ್ ಇಂಡಿಯ (ಆಂಗ್ಲ) ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿರುತ್ತದೆ ಹಾಗೂ ಟೆಂಡರ್ ಪ್ರಕಟಣೆಯನ್ನು ರಾಜ್ಯ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಟೆಂಡರ್ ಬುಲೆಟಿನ್ ಅಧಿಕಾರಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರಿಗೆ ಸಲ್ಲಿಸಿ ಸ್ವೀಕೃತಿ ಪಡೆಯಲಾಗಿರುತ್ತದೆ. ಸದರಿ ಟೆಂಡರ್ ಪ್ರಕಟಣೆ & ಡಾಕುಮೆಂಟ್‌ನ್ನು ಇ-ಪ್ರೊಕೊರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿರುತ್ತದೆ.

ಟೆಂಡರ್ ಪ್ರಕಟಣೆಯಂತೆ ದಿನಾಂಕ: 20-12-2012 ರಂದು ತಾಂತ್ರಿಕ ಬಿಡ್‌ನ್ನು ಹಾಜರಿದ್ದ ಏಜೆನ್ಸಿಗಳ ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ತೆರೆಯಲಾಗಿದ್ದು ತಾಂತ್ರಿಕ ಬಿಡ್‌ನಲ್ಲಿ ನಾಲ್ಕು ಏಜೆನ್ಸಿಗಳಾದ ಮೆ|| ಜಾನಕಿ ಟ್ರಾವೆಲ್ಸ್ ಏಜೆನ್ಸಿ, ಮೆ|| ಚೇತನ ಟ್ರಾವೆಲ್ಸ್, ಮೆ|| ಜಾನಕಿ ಮಾರ್ಷಲ್ ಟೂರ್ಸ್ ಎನ್ ಟ್ರಾವೆಲ್ಸ್ ಮತ್ತು ಮೆ|| ಗುರು ಟ್ರಾವೆಲ್ಸ್‌ರವರು ಅರ್ಹತೆಗೊಂಡಿರುತ್ತಾರೆ.

ಟೆಂಡರ್ ಮೌಲ್ಯಮಾಪನ ಸಮಿತಿಯಿಂದ ಅನುಮೋದನೆ ಪಡೆದು ತಾಂತ್ರಿಕ ಬಿಡ್‌ನಲ್ಲಿ ಅರ್ಹತೆಗೊಂಡ ಬಿಡ್‌ದಾರರಿಗೆ ಆರ್ಥಿಕ ಬಿಡ್ ತೆರೆಯಲಾಗಿರುತ್ತದೆ. ಆದರೆ, ಆರ್ಥಿಕ ಮೌಲ್ಯಮಾಪನ ಸಮಿತಿಯು ಪ್ಯಾಕೇಜ್-1 ಅಡಿಯಲ್ಲಿನ ಅರ್ಹ ಟೆಂಡರ್‌ದಾರರಾದ ಮೆ|| ಜಾನಕಿ ಟ್ರಾವಲ್ಸ್ ಏಜೆನ್ಸಿ (ಎ1) ರವರು ಹಾಗೂ ಪ್ಯಾಕೇಜ್-2 ಅಡಿಯಲ್ಲಿನ ಅರ್ಹ ಟೆಂಡರ್‌ದಾರರಾದ ಮೆ|| ಚೇತನ್ ಟ್ರಾವಲ್ಸ್ ರವರು (ಎ1) ನಮೂದಿಸಿರುವ ದರಗಳು ಜಾಸ್ತಿ ಇರುವುದರಿಂದ ಸಂಧಾನ ನಡೆಸಲು ಆದೇಶಿಸಿರುವ ಮೇರೆಗೆ ಪ್ಯಾಕೇಜ್-1 ಅಡಿಯಲ್ಲಿನ ಅರ್ಹ ಟೆಂಡರ್‌ದಾರರಾದ ಮೆ|| ಜಾನಕಿ ಟ್ರಾವಲ್ಸ್ ಏಜೆನ್ಸಿ (ಎ1) ರವರು ಸಂಧಾನಿತ ನಂತರ ದರಗಳನ್ನು ಕೆಳಕಂಡಂತೆ ಸಲ್ಲಿಸಿರುತ್ತಾರೆ.

***PACKAGE-1***

| *Agency Name* | *Type of vehicles* | *Tender Rate/month/ per vehicle (in Rs.) (Before Negotiation)* | *Tender Rate/month/ per vehicle (in Rs.)(After Negotiation)* | *Amount reduced (in Rs.)* |
|---|---|---|---|---|
| M/S Janaki Travel Agency | Tata Indica Non AC | 18,950 | 18,932 | 18-00 |
| | Tata Indica AC | 21,200 | 21,110 | 90-00 |

ಪ್ಯಾಕೇಜ್-2 ಅಡಿಯಲ್ಲಿನ ಅರ್ಹ ಟೆಂಡರ್‌ದಾರರಾದ ಮೆ|| ಚೇತನ್ ಟ್ರಾವಲ್ಸ್ (ಎ1) ರವರು ಈಗಾಗಲೇ ನಮೂದಿಸಿರುವ ದರಗಳನ್ನು ಪರಿಗಣಿಸಲು ಕೋರಿದ್ದು ದರಗಳು ಕೆಳಕಂಡಂತೆ ಇರುತ್ತವೆ.

***PACKAGE-2***

| *Agency Name* | *Type of vehicles* | *Tender Rate/month/ per vehicle (in Rs.) (Before Negotiation)* | *Tender Rate/month/ per vehicle (in Rs.) (After Negotiation)* | *Amount reduced (in Rs.)* |
|---|---|---|---|---|
| M/S Chetana | Tata Indica Non | 20,399 | 20,399 | -Nil- |

| | | | | |
|---|---|---|---|---|
| Travels | AC | | | |
| | Tata Indica AC | 21,049 | 21,049 | -Nil- |

ಪ್ಯಾಕೇಜ್‌–1 ಅಡಿಯಲ್ಲಿನ ಟೆಂಡರ್‌ನ ಆರ್ಥಿಕ ಬಿಡ್‌ನಲ್ಲಿ ಮೆ|| ಜಾನಕಿ ಟ್ರಾವಲ್ಸ್‌ ರವರು ನಮೂದಿಸಿರುವ ಒಟ್ಟು 180 ವಾಹನಗಳಿಗೆ ಪ್ರತಿ ತಿಂಗಳಿಗೆ ಅಂದಾಜು ಮೊತ್ತ ರೂ. 34,29,540/– ಮತ್ತು ಒಂದು ವರ್ಷದ ಅವಧಿಗೆ ಒಟ್ಟು ವೆಚ್ಚ ರೂ. 4,11,54,480/– ಹಾಗೂ ಮೆ|| ಚೇತನ್‌ ಟ್ರಾವಲ್ಸ್‌ ರವರು ನಮೂದಿಸಿರುವ ಒಟ್ಟು 190 ವಾಹನಗಳಿಗೆ ಪ್ರತಿ ತಿಂಗಳಿಗೆ ಅಂದಾಜು ಮೊತ್ತ ರೂ. 38,82,310/– ಮತ್ತು ಒಂದು ವರ್ಷದ ಅವಧಿಗೆ ಒಟ್ಟು ವೆಚ್ಚ ರೂ. 4,65,87,720/–ಗಳಾಗಿದ್ದು ವಿವರಗಳು ಕೆಳಕಂಡಂತೆ ಇರುತ್ತದೆ

***PACKAGE-1***

| *Sl. No* | *Agency Name* | *Type of vehicles* | *Tender Rate/month/ per vehicle (in Rs.)* | *No of vehicles* | *Amount (in Rs.)* | *Remarks* |
|---|---|---|---|---|---|---|
| 1 | M/S Janaki Travel Agency | Tata Indica Non AC | 18,932 | 170 | 32,18,440 | L1 |
| | | Tata Indica AC | 21,110 | 10 | 2,11,100 | |
| | | **Total** | | **180** | **34,29,540** | |

***PACKAGE-2***

| *Sl. No* | *Agency Name* | *Type of vehicles* | *Tender Rate/month/ per vehicle (in Rs.)* | *No of vehicles* | *Amount (in Rs.)* | *Remarks* |
|---|---|---|---|---|---|---|
| 1 | M/S Chetana Travels | Tata Indica Non AC | 20,399 | 180 | 36,71,820 | L1 |
| | | Tata Indica AC | 21,049 | 10 | 2,10,490 | |
| | | **Total** | | **190** | **38,82,310** | |

ಹಾಗೂ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ ಅರ್ಹ ಅಧಿಕಾರಿಗಳಿಗೆ ಗುತ್ತಿಗೆ ವಾಹನ ಸೌಲಭ್ಯವನ್ನು ಇನ್ನು ಮುಂದೆ ಕಲ್ಪಿಸಲು ಅನುವು ಮಾಡಿಕೊಳ್ಳಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಪರಿಗಣಿಸಿ, 2013–14ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ವಾಹನಗಳನ್ನು ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಪ್ಯಾಕೇಜ್‌–1 ಅಡಿಯಲ್ಲಿನ ಟೆಂಡರ್‌ನ ಆರ್ಥಿಕ ಬಿಡ್‌ನಲ್ಲಿ ಮೆ|| ಜಾನಕಿ ಟ್ರಾವಲ್ಸ್‌ ರವರು ನಮೂದಿಸಿರುವ ಒಟ್ಟು 180 ವಾಹನಗಳಿಗೆ ಪ್ರತಿ ತಿಂಗಳಿಗೆ ಅಂದಾಜು ಮೊತ್ತ ರೂ. 34,29,540/– ಮತ್ತು ಒಂದು ವರ್ಷದ

ಅವಧಿಗೆ ಒಟ್ಟು ವೆಚ್ಚ ರೂ. 4,11,54,480/– ಹಾಗೂ ಮೆ॥ ಚೇತನ್ ಟ್ರಾವೆಲ್ಸ್ ರವರು ನಮೂದಿಸಿರುವ ಒಟ್ಟು 190 ವಾಹನಗಳಿಗೆ ಪ್ರತಿ ತಿಂಗಳಿಗೆ ಅಂದಾಜು ಮೊತ್ತ ರೂ. 38,82,310/– ಮತ್ತು ಒಂದು ವರ್ಷದ ಅವಧಿಗೆ ಒಟ್ಟು ವೆಚ್ಚ ರೂ. 4,65,87,720/–ಗಳಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಹಾಗೂ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ ಅರ್ಹ ಅಧಿಕಾರಿಗಳಿಗೆ ಗುತ್ತಿಗೆ ವಾಹನ ಸೌಲಭ್ಯವನ್ನು ಇನ್ನು ಮುಂದೆ ಕಲ್ಪಿಸಲು ಅನುವು ಮಾಡಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅವಗಾಹನೆಗೆ ತರುತ್ತಾ ಟೆಂಡರ್ & ಆಡಳಿತಾತ್ಮಕ ಅನುಮೋದನೆ ಕೋರಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ಮಾನ್ಯ ಆಯುಕ್ತರ ದಿ.20.03.2013ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *14]. ವಿಷಯದ ಸಂಖ್ಯೆ :–ತೆಆಸ್ಥಾಸ/04/2013–14*

ಆಯುಕ್ತರ ದಿನಾಂಕ : 18.05.2013ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೊಮ್ಮನಹಳ್ಳಿ ವಲಯ ವ್ಯಾಪ್ತಿಗೆ ಬರುವ ಸಹಾಯಕ ಕಂದಾಯ ಅಧಿಕಾರಿ (ಅಂಜನಾಪುರ) ವಲಯಕ್ಕೆ ಸೇರಿದ ವಾರ್ಡ್ ಸಂಖ್ಯೆ : 194, ಗೊಟ್ಟಿಗೆರೆಗೆ ಸೇರಿದ ಕೊತ್ತನೂರು ಗ್ರಾಮದ ಪ್ರದೇಶದಲ್ಲಿರುವ ಕೊತ್ತನೂರು ಕೆರೆಯಲ್ಲಿ ಆಕಸ್ಮಿಕವಾಗಿ ಕೆರೆಗೆ ಬಿದ್ದು ನಾಲ್ಕು ಜನ ಮಕ್ಕಳು ದಿನಾಂಕ : 29–09–2012 ರಂದು ಮರಣ ಹೊಂದಿರುತ್ತಾರೆ. ಮರಣ ಹೊಂದಿರುವ ಮಕ್ಕಳಾದ (1) ಗಣೇಶ್ ಬಿನ್ ವೆಂಕಟರಾಮ್ 6 ವರ್ಷ (2) ಪ್ರಕಾಶ್ ಬಿನ್ ವೆಂಕಟರಾಮನ್ 3 ವರ್ಷ (3) ಮಮತ ಬಿನ್ ಲಕ್ಷ್ಮಿ 7 ವರ್ಷ ಮತ್ತು (4) ಮಧು ಬಿನ್ ಲಕ್ಷ್ಮಿ 5 ವರ್ಷ ರವರುಗಳ ಸಂಬಂಧಿಕರಾದ ಶ್ರೀಮತಿ. ಚಂದ್ರ ಮತ್ತು ಲಕ್ಷ್ಮಿ ರವರುಗಳು ಮೃತರ ಮಕ್ಕಳಿಗೆ ಸಂಬಂಧಪಟ್ಟಂತೆ, ಸ್ಥಳೀಯ ಮಹಜರ್, ಪೋಲೀಸ್ ಇಲಾಖೆಯಿಂದ ಶವಗಳ ಸ್ವೀಕೃತಿ ಪತ್ರ, ಮಕ್ಕಳ ಮರಣ ಪ್ರಮಾಣ ಪತ್ರಗಳು, ಕಿಮ್ಸ್ ಆಸ್ಪತ್ರೆ ವತಿಯಿಂದ ಪೋಸ್ಟ್ ಮಾರ್ಟಂ ವರದಿ ಪ್ರತಿಗಳನ್ನು ನೀಡಿರುತ್ತಾರೆ.

ತತ್ಸಂಬಂಧವಾಗಿ ಮೃತರ ಕುಟುಂಬದ ಸದಸ್ಯರಿಗೆ / ವಾರಸುದಾರರಿಗೆ (ಒಟ್ಟು ಎರಡು ಕುಟುಂಬದವರಿಗೆ) ಪರಿಹಾರವನ್ನು ಮಂಜೂರು ಮಾಡಲು ಭಾರತ ಸರ್ಕಾರದ ಆದೇಶ ಸಂಖ್ಯೆ : 32/07/2001/ಎನ್‌ಡಿಎಂ/1, ದಿನಾಂಕ : 16–01–2012ರ ಅನ್ವಯ ಪರಿಹಾರವನ್ನು ನೀಡಲು ಸದರಿ ಭಾರತ ಸರ್ಕಾರ ಆದೇಶವು ಕೇವಲ ಪ್ರಕೃತಿ ವಿಕೋಪಗಳಲ್ಲಿ ಸಂಭವಿಸುವ ನಷ್ಟಕ್ಕೆ ಹಾಗೂ ಆ ಸಮಯದಲ್ಲಿ ಸಂತ್ರಸ್ತರ ಕುಟುಂಬಗಳಿಗೆ ಒದಗಿಸಬಹುದಾದ ನೆರವನ್ನು ತಿಳಿಸುತ್ತದೆ. ಆದ ಕಾರಣ ಪ್ರಸ್ತುತ ಪ್ರಕರಣದಲ್ಲಿ ಸದರಿ ಮಕ್ಕಳು ಆಕಸ್ಮಿಕವಾಗಿ ಮರಣ ಹೊಂದಿರುತ್ತಾರೆ. ಸದರಿ ಕುಟುಂಬಗಳಿಗೆ ಪ್ರಕೃತಿ ವಿಕೋಪಗಳ ಮೇರೆಗೆ ಸರ್ಕಾರವು ನೀಡಲು ನಿಗಧಿಪಡಿಸಲಾಗಿರುವ ಪರಿಹಾರ ಅಥವಾ ನೆರವನ್ನು ನೀಡಲು ಅವಕಾಶವಿಲ್ಲದಿರುವ ಪ್ರಯುಕ್ತ, ಈ ಪ್ರಕರಣದಲ್ಲಿ ಅನುಕಂಪದ ಆಧಾರ ಸದರಿ ಮೃತರ ಕುಟುಂಬಗಳಿಗೆ ನೆರವನ್ನು ನೀಡಲು ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅಥವಾ ಪಾಲಿಕೆ ಪ್ರತ್ಯೇಕ ನಿರ್ಣಯವನ್ನು ತೆಗೆದುಕೊಳ್ಳುವ ಸಲುವಾಗಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ಮಾನ್ಯ ಆಯುಕ್ತರ ದಿ.18.05.2013ರ ಟಿಪ್ಪಣಿಯನ್ನು ಒಪ್ಪುತ್ತಾ, ಆಕಸ್ಮಿಕವಾಗಿ ಮರಣ ಹೊಂದಿದ ಪ್ರತಿ ಮಗುವಿಗೆ ತಲಾ ರೂ.ಐವತ್ತು ಸಾವಿರದಂತೆ ಪರಿಹಾರವನ್ನು ಅವರ ಕುಟುಂಬದವರಿಗೆ ನೀಡಲು ಸಮಿತಿಯು ತೀರ್ಮಾನಿಸಿತು.**

## *15]. ವಿಷಯದ ಸಂಖ್ಯೆ :–ತೆಆಸ್ಥಾಸ/05/2012–13*

